ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ವಸತಿ ಶಾಲೆ ಪ್ರವೇಶ/2023 ದಿನಾಂಕ: 03-06-2023

## ಪ್ರಕಟಣೆ

ಕರ್ನಾಟಕ ರಾಜ್ಯದಲ್ಲಿನ ವಸತಿ ಶಿಕ್ಷಣ ಸಂಘದಡಿಯಲ್ಲಿನ ವಿವಿಧ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಮೊದಲನೇ ಹಂತದಲ್ಲಿ ವಿಶೇಷ ವರ್ಗಗಳ ಸೀಟು ಹಂಚಿಕೆಯ ಫಲಿತಾಂಶವನ್ನು ದಿನಾಂಕ 27-05-2023 ರಂದು ಮತ್ತು ಎರಡನೇ ಹಂತದ ಸೀಟು ಹಂಚಿಕೆಯ ಫಲಿತಾಂಶವನ್ನು ದಿನಾಂಕ 31-05-2023 ರಂದು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿತ್ತು.

ವಿಶೇಷ ವರ್ಗಗಳಲ್ಲಿ ಹಂಚಿಕೆಯಾದ ಅಭ್ಯರ್ಥಿಗಳನ್ನು ನಿಯಮಾನುಸಾರ ಪರಿಗಣಿಸಿ ಎರಡನೇ ಹಂತದ ಸೀಟು ಹಂಚಿಕೆಯನ್ನು ಮಾಡಿ ಫಲಿತಾಂಶವನ್ನು ಪ್ರಕಟಿಸಲಾಗಿತ್ತು. ಆದರೆ ವಿಶೇಷ ವರ್ಗದ ಅಭ್ಯರ್ಥಿಗಳು ಮೊದಲನೇ ಹಂತದಲ್ಲಿ ಹಂಚಿಕೆಯಾದ ಶಾಲೆಗಳಲ್ಲಿಯೇ ದಾಖಲಾತಿಗಳನ್ನು ಈಗಾಗಲೆ ಪಡೆದಿದ್ದು, ಅಲ್ಲಿಯೇ ಪ್ರವೇಶಾತಿಯನ್ನು ನೀಡಲು ಕೋರಿರುತ್ತಾರೆ.

ವಿಶೇಷ ವರ್ಗದ ಅಭ್ಯರ್ಥಿಗಳು ಸಾಮಾಜಿಕ ದುರ್ಬಲ ವರ್ಗಕ್ಕೆ ಸೇರಿದವರಾಗಿರುವ ಕಾರಣದಿಂದಾಗಿ ಹಾಗು ಮೊದಲನೇ ಹಂತದ ಶಾಲೆಗಳಲ್ಲಿ ಪ್ರವೇಶ ಮುಂದುವರಿಸಲು ಆಸಕ್ತಿ ತೋರಿರುವ ಹಿನ್ನಲೆಯಲ್ಲಿ, ಎರಡನೇ ಹಂತದಲ್ಲಿ ವಿಶೇಷ ವರ್ಗಗಳ ಅಭ್ಯರ್ಥಿಗಳಿಗೆ ಹಂಚಿಕೆಯಾದ ಹಲವು ಸೀಟುಗಳು ಸೀಟು ಮ್ಯಾಟ್ರಿಕ್ಸ್‌ಗೆ ಸೇರ್ಪಡೆಯಾಗುವ ಸಂಭವವಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ 31-05-2023 ರಂದು ಪ್ರಕಟಿಸಿದ್ದ ಎರಡನೇ ಹಂತದ ಸೀಟು ಹಂಚಿಕೆಯ ಫಲಿತಾಂಶವನ್ನು ಹಿಂಪಡೆಯಲಾಗಿದೆ.

ಎರಡನೇ ಹಂತದ ಸೀಟು ಹಂಚಿಕೆಯ ಪರಿಷ್ಕೃತ ಫಲಿತಾಂಶದ ಪಟ್ಟಿಯನ್ನು ಸದ್ಯದಲ್ಲಿಯೇ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

ಆಯಾ ಶಾಲೆಗಳ ಪ್ರಿನ್ಸಿಪಾಲರುಗಳು ಎರಡನೇ ಹಂತದ ನಂತರ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ಈ ಮೇಲಿನ ಮಾಹಿತಿಯನ್ನು ನೀಡಿ, ಪರಿಷ್ಕೃತಗೊಳ್ಳುವ ಎರಡನೇ ಹಂತದ ಸೀಟು ಹಂಚಿಕೆಯ ಫಲಿತಾಂಶದ ಅನ್ವಯ ಪ್ರವೇಶಾತಿಯನ್ನು ಪಡೆಯಲು ಸೂಚಿಸುವುದು.

ಸಹಿ/-
ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in